ಅಗಸ್ಟ್ 2023

# ಸೇವಾ ವಾಣಿ




ಸೇವಾ ಸಂಗಮ

ಆರ್ಬಿಟ್



ಪೂಜ್ಯ ರಾಬರ್ಟ್ ಮಿರಾಂಡಾ
ಗುಲ್ಬರ್ಗ ಧರ್ಮಾಧ್ಯಕ್ಷರು

ಫಾ. ವಿಕ್ಟರ್ ವಾಸ್
ನಿರ್ದೇಶಕರು

## "ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ವಿಶೇಷ ಗಮನ ಹರಿಸಿ"

ದಿನಾಂಕ 11/07/2023 ರಂದು ಸೇವಾ ಸಂಗಮ ಸಂಸ್ಥೆಯಲ್ಲಿ ಕಲಬುರಗಿ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದಲ್ಲಿ ನ್ಯೂನತೆಯುಳ 0-6 ವರ್ಷದೊಳಗಿನ ಮಕ್ಕಳ ಪಾಲಕರಿಗೆ ತರಬೇತಿಯನ್ನು ಹಮ್ಮಿಕೋಳ್ಳಲಾಯಿತ್ತು, 46 ಜನ ಪಾಲಕರು ಭಾಗವಹಿಸಿದ್ದರು ಕಲಬುರಗಿ ಧರ್ಮಕ್ಷೇತ್ರದ ಶ್ರೇಷ್ಠ ಗುರುಗಳಾದ ಫಾದರ್ ಸ್ಟ್ಯಾನಿ ಲೋಬೊ ಅವರು ಮಕ್ಕಳಿಗೆ ಮನೆಯಲ್ಲಿ ಯಾವ ರೀತಿಯಾಗಿ ಅವರ ಲಾಲನೆ ಪಾಲನೆ ಮಾಡಬೇಕೆಂದು ಮಾಹಿತಿ ತಿಳಿಸಿದರು. ನೇತ್ರ ಅವರು ಮಕ್ಕಳನ್ನು ಹೇಗೆ ಮನೆಯಲ್ಲಿ ಚಟುವಟಿಕೆ ಮಾಡಬೇಕೆಂದು ಚಟುವಟಿಕೆ ಮಾಡಿ ತೋರಿಸಿದ್ದರು. ಸೇವ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ ಅವರು ಸೇವ ಸಂಗಮ ಸಂಸ್ಥೆ ಬೆಳೆದು ಬಂದ ಹಾದಿಯ ಬಗ್ಗೆ ವಿವರಿಸಿದ್ದರು. ಪ್ರೊಗ್ರಾಂ ಮ್ಯಾನೇಜರಾದ ಸದನಂದ ಅವರು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡ್ಡಿಯಲ್ಲಿ ನಾವು ಹೇಗೆ ಕೇಲಸ ಮಾಡುತ್ತೇವೆ ಎಂದು ವಿವರಿಸಿದ್ದರು.





# ಮಕ್ಕಳ ಸಹಾಯವಾಣಿ ಕಾರ್ಯಕ್ರಮ

## “ಬಾಲ್ಯ ವಿವಾಹದಿಂದ ಮಗುವಿನ ರಕ್ಷಣೆ”




ಜುಲೈ 10.2023 ರಂದು ಚಿಟ್ಟಗುಪ್ಪಾ ತಾಲೂಕಿನ ತಾಳಮಡಗಿ ಗ್ರಾಮದ ಕು. ನಂದಿನಿ ತಂದೆ ಶಿವಾಜಿ ಈ ಮಗುವಿನ ಬಾಲ್ಯ ವಿವಾಹ ಕಾರ್ಯಕ್ರಮ ಆಯೋಜಿಸಲಾಯಿತ್ತು. ಮಕ್ಕಳ ಸಹಾಯವಾಣಿಗೆ ಬಂದ ಕರೆಯ ಮೇರೆಗೆ ಆರ್ಬಿಟ್ ಸಂಸ್ಥೆಯ ಮಕ್ಕಳ ಸಹಾಯವಾಣಿ ತಂಡ, ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳೊಂದಿಗೆ ಹೋಗಿ ಬಾಲ್ಯ ವಿವಾಹ ಕಾರ್ಯವನ್ನು ತಡೆಗಟ್ಟಿ, ಬಾಲ್ಯ ವಿವಾಹದಿಂದಾಗುವ ದುಷ್ಪಪರಿಣಾಮಗಳು, ದಂಡ ಮತ್ತು ಶಿಕ್ಷೆ ಎದರ ಕುರಿತು ಮಾಹಿತಿನೀಡಿ ಹುಡುಗಿಯ ಶಿಕ್ಷಣ ಮುಂದುವರಿಸಲು ಸಹಾಯ ಮಾಡಿದರು.

## “ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮ”



ಜುಲೈ 19.2023 ರಂದು ಹುಮನಾಬಾದ ತಾಲೂಕಿನ ಹಳ್ಳಿಖೇಡ (ಕೆ) ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಕ್ಕಳ ಸಹಾಯವಾಣಿ 1098 ಉಪಕೇಂದ್ರ ಆರ್ಬಿಟ್ ಸಂಸ್ಥೆ ಹಾಗೂ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಯಾದ ಶ್ರೀ ರವಿರಾಜ ಭಮಶೆಟ್ಟಿ ಇವರು ಮಕ್ಕಳ ಹಕ್ಕುಗಳ ಕುರಿತು ಮಾಹಿತಿ ನೀಡಿದರು. ಈ ಜಾಗೃತಿ ಕಾರ್ಯಕ್ರಮದಿಂದ ಒಂದು ಪ್ರಕೆಣವು ಬೆಳಕಿಗೆ ಬಂದಿತ್ತು. ಈ ಕಾರ್ಯಕ್ರಮದಲ್ಲಿ 238 ಜನರು ಭಾಗವಹಿಸಿದರು.

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

ಜುಲೈ 13.2023 ರಂದು ಹುಮನಾಬಾದ ತಾಲೂಕಿನ ಹಣಕುಣಿ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಅಂಗನವಾಡಿ ಕೇಂದ್ರದ ಶಿಕ್ಷಕಿಯಾದ ಶ್ರೀ ಗೀತಾ ರವರು ವಿಕಲತೆ ಮಕ್ಕಳ ಬಗ್ಗೆ ಮಾತನ್ನಾಡುತ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ ರವರು ಮಕ್ಕಳಿಗೆ ಉಚಿತವಾಗಿ ಫಿಜಿಯೋಥೇರಪಿ ಹಾಗೂ ಸ್ಪೀಚ್‌ಥೆರಪಿ ಮಾರಿಸಲು ನಮ್ಮ ಗ್ರಾಮಕ್ಕೆ ಬಂದಿದ್ದಾರೆ ಕೂತಲ್ಲೆ ಕುಳಿತಿರುವ ಮಕ್ಕಳಿಗೆ ಗೋಡೆಯ ಸಹಾಯದಿಂದ ನಡೆಸುವುದನ್ನು ಹೀಗೆ ಹಲವಾರು ಚಟುವಟಿಕೆಗಳು ಕಲಿಸಿಕೊಡಲಿದ್ದಾರೆ ಎಂದು ತಿಳಿಸಿದ್ದಾರೆ. ಸರ್ಕಾರದಿಂದ ಸಿಗುವಂತಹ ಎಲ್ಲಾ ಸೌಲಭ್ಯಗಳುನ್ನು ಲಬಿಸಲು ಸಹಾಯ ಮಾರಿಕೊಡಲಿದ್ದಾರೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 10 ಜನರು ಭಾಗವಹಿಸಿದ್ದರು.







ಜುಲೈ 17.2023 ರಂದು ಹುಮನಾಬಾದ ತಾಲೂಕಿನ ಸೇಡೊಳ ಗ್ರಾಮದಲ್ಲಿ ಶೀಘ್ರ ಪತೆ ಹಚ್ಚುವಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಕವಿತಾ ರವರು ವಿಕಲ ಚೇತನ ಮಕ್ಕಳಿಗೆ ಪೋಷಕರ ಸಹಾಯದಿಂದ ಪ್ರತಿ ತಿಂಗಳು ಮಕ್ಕಳಿಗೆ ಚಟುವಟಿಕೆ ಮಾಡಿಸುವುದರ ಮೂಲಕ ಬದಲಾವಣೆ ತರಲು ಪ್ರಯತ್ನಿಸುತಿದ್ದಾರೆ. ಈ ಕಾರ್ಯಕ್ರಮದಲ್ಲಿ ವಿಕಲ ಚೇತನ ಮಕ್ಕಳ ಬಗ್ಗೆ ಅರಿವು ಮೂಡಿಸಲಾಯಿತು. ಬಡ ಕುಟುಂಬದ ಮಕ್ಕ್ಳಿಗೆ ಸರಕಾರದಿಂದ ಸಿಗುವಂತಹ ಸೌಲಭ್ಯಗಳು ಯು.ಡಿ.ಐ.ಡಿ ಕಾರ್ಡ ಮತ್ತು ಆಧಾರ ಕಾರ್ಡ ಲಬಿಸಲು ಸಹಾಯ ಮಾರಿಕೊಡಲಿದ್ದಾರೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 10 ಜನ ಸದಸ್ಯರು ಭಾಗವಹಿಸಿದ್ದರು.



## “ಗ್ರಹ ಲಕ್ಷ್ಮಿ ಯೋಜನೆ ಮಾಹಿತಿ ಕಾರ್ಯಕ್ರಮ”

ಜುಲೈ 04.2023 ರಂದು ಹುಮನಾಬಾದ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದ ಪುರಸಭೇಯ ಅಡಿಯಲ್ಲಿ ಗ್ರಹ ಲಕ್ಷ್ಮಿ ಯೋಜನೆ ಮಾಹಿತಿ ಕಾರ್ಯಗಾರ ನಡಿಸಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ವಿಜೈಲಕ್ಷ್ಮಿ ಅವರು ಸರಕಾರದಿಂದ ಸಿಗುವ ಸೌಲಭ್ಯಗಳ ಮಾಹಿತಿ ನೀಡಿದರು. ವಿಶೇಷವಾಗಿ ಗ್ರಹ ಲಕ್ಷ್ಮಿ ಯೋಜನೆ ಉಪಯೋಗ ಪಡೆದುಕೊಂಡು ಮನೆಯ ಸದಸ್ಯರ ಖಾತೆಗೆ 2000 ರೂ ನೆರವಾಗಿ ಬರುತ್ತದೆ ಯಾರಿಗು ಹಣ ನೀಡುವಂತಿಲ್ಲಾ ಎಂದು ಜಾಗೃತಿ ಮುಡಿಸಿದರು. ಅಲ್ಲಿದ 50 ಮಹಿಳೆಯರು ಗ್ರಹ ಲಕ್ಷ್ಮಿ ಯೋಜನೆ ಅರ್ಜಿಗಳನ್ನು ಸ್ವಿಕರಿಸಿದರು. ಈ ಕಾರ್ಯಕ್ರಮದಲ್ಲಿ  ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ ಸಂಯೋಜಕಿಯಾದ ಶ್ರೀಮತಿ ಮಮತ, ಅಂಗನವಾಡಿ ಕಾರ್ಯಕರ್ತೆತಾದ ಪಾರವತಿ, ಪುರಸಭೇಯ ವ್ಯವಸ್ಥಾಪಕರು ಶ್ರೀ ಸುನೀಲ್ ಹಾಗೂ ಮಹಿಳೆಯರು ಒಳಗೊಂಡು ಒಟ್ಟು 60 ಜನ ಉಪಸ್ಥಿತರಿದ್ದರು.

# ನವಜೀವನ ಕಾರ್ಯಕ್ರಮ

## “MGNEREGA ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾಯಕ್ರಮ”

ಜುಲೈ 11.2023 ರಂದು ಹುಮನಾಬಾದ ತಾಲೂಕಿನ ದುಬಲಗುಂಡಿ ಗ್ರಾಮದಲ್ಲಿ ಉದ್ಯೋಗ ಖಾತರಿ ಕೂಲಿ ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ  ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕರ್ತೆ ಶ್ರೀಮತಿ ಪೂಜಾ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮತನಾಡುತ್ತಾ ಮಾನಸಿಕ ಕಾಯಿಲೆ ಎಂದರೇನು, ಹೇಗೆ ಬರುತ್ತದೆ ಮತ್ತು ಮನಸಿಕ ಅಸ್ವಸ್ಥತೆಯ ಲಕ್ಷಣಗಳು ಯಾವವು ಮತ್ತು  ಮಾನಸಿಕ ಅಸ್ವಸ್ಥರನ್ನು ಹೇಗೆ ಪುನರ್ವಸತಿಗೆ ತರಬಹುದು ಹಾಗೂ ಮಾನಸಿಕ ಕಾತಿಲೆ ಬಗ್ಗೆ ಜನರಲ್ಲಿರುವ ಮೂಡನಂಬಿಕೆಗಳನ್ನು ತೆಗೆದುಹಾಕುವ ಕುರಿತು ವಿವರಣೆ ನೀಡಿದರು. ಈ ಕಾರ್ಯಕ್ರಮದಲ್ಲಿ ಉದ್ಯೋಗ ಖಾತರಿ ಯೋಜನೆಯ ಅಧಿಕಾರಿಯಾದ ಶ್ರೀಮಾನ ದೀಪಕ ಹಾಗೂ 51 ಜನರು ಭಾಗವಹಿಸಿದರು.



## “ಮಾನಸಿಕ ಅಸ್ವಸ್ಥರ ಪಾಲಕರಿಗೆ ಜಾಗ್ರತಿ ಕಾರ್ಯಕ್ರಮ”

ಜುಲೈ 07.2023 ರಂದು ಹುಮನಬಾದ ತಾಲೂಕಿನಲ್ಲಿ ವಾರ್ಡ್‌ಸಂಖೆ 18 ಜೆರ್ಪೆಟ್ ಓಣಿಯಲ್ಲಿ ಮಾನಸಿಕ ಅಸ್ವಸ್ಥರ ಪಾಲಕರಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಕವಿತಾ ಅವರು ಮಾನಸಿಕ ಕಾಯಿಲೆ ಎಂದರೇನು, ಮನಸಿಕ ಅಸ್ವಸ್ಥತೆಯ ಲಕ್ಷಣಗಳು, ಮಾನಸಿಕ ಅಸ್ವಸ್ಥರನ್ನು ಹೇಗೆ ಪುನರ್ವಸತಿಗೆ ತರಬಹುದು ಎಂದು ಹೆಳಿದರು. ಹಾಗೂ ಪುರಸಭೆಯಿಂದ ಸಿಗುವ ಸವಲತ್ತುಗಳ ಬಗ್ಗೆ ಜಾಗೃತಿ ನೀಡಿದ ಪ್ರಯುಕ್ತವಾಗಿ  ಪುರಸಭೆಯ ವತಿಯಿಂದ ನಾಲ್ಕೂ ಜನ PWMI ಪಾಲಕರಿಗೆ ಉದ್ಯೋಗಕ್ಕಾಗಿ 10 ಸಾವಿರದಂತೆ 40,000 ರೂ ಸಾಲ ಮಂಜೂರಾತಿ ನೀಡಿರುತ್ತಾರೆ.





# "ಸಿಬ್ಬಂದಿ ಸಾಮರ್ಥ್ಯ ಬಲವರ್ದನೆ ತರಬೇತಿ"

ದಿನಾಂಕ 20/07/23 ಹಾಗೂ 21/07/23 ರಂದು ಹುಮನಾಬಾದ ಪಟ್ಟಣದ ಆರ್ಬಿಟ ಸಂಸ್ಥೆಯಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರತರಿಗೆ ಸಿಬ್ಬಂದಿ ಸಾಮರ್ಥ್ಯ ಬಲವರ್ದನೆ ತರಬೇತಿ ಹಮ್ಮಿಕ್ಕೊಳ್ಳಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀ ಸಂತೋಷ ಅವರು ತರಬೇತಿಯನ್ನು ಉದ್ದೇಶಿಸಿ ವಿವರಿಸುತ್ತಾ ಮಾನಸಿಕ ಅಸ್ವಸ್ಥರಿಗಾಗಿ ಕೆಲಸ ಮಾಡಬೇಕಾದರೆ ನಾವು ಮೊಟ್ಟ ಮೋದಲು ಮಾನಸಿಕ ಅಸ್ವಸ್ಥರ ನಿರಕ್ಷೆ ಹಾಗು ಮಾನಸಿಕ ಅಸ್ವಸ್ಥರ ಪಾಲಕರ ನಿರಿಕ್ಷೇಗಳನ್ನು ಕಲೆ ಹಾಕಿ ಅದರ ಪ್ರಕಾರ ಕಾರ್ಯ ನೀರ್ವಹಿಸಲು ಸೂಚಿಸಿದರು. ತದನಂತರ "ವಿಶೇಷ ವಿಕಲಚೇತನರ ಸಂಘ" ಯಾವ ರೀತಿ ರಚನೆ ಮಾಡಬೇಕು ಹಾಗೂ ಸಂಘದಿಂದಾಗುವ ಅನೂಕೂಲಗಳ ಕುರಿತು ಮಾಹಿತಿ ನೀಡಿದರು.





.

## "ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ವನಮಹೋತ್ಸವ ಕಾರ್ಯಕ್ರಮ"



ಜುಲೈ 13.2023 ರಂದು ಚಿಟಗುಪ್ಪಾ ತಾಲೂಕಿನ ನಿರ್ಣಾ ಗ್ರಾಮದ ನಕ್ಷತ್ರ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ಆರ್ಬಿಟ್ ಸಂಸ್ಥೆಯಿಂದ ವನಮಹೋತ್ಸವದ ಕರ್ಯಕ್ರಮ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣಕುಮಾರ ಅವರು ವನಮಹೋತ್ಸವದ ಕುರಿತು ಮಾತನ್ನಾಡಿ "ಮನೆಗೊಂದು ಮರ ಊರಿಗೊಂದು ವನ" ಬೆಳೆಸಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ನಕ್ಷತ್ರ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರು ಹಾಗೂ ಮಹಿಳೆಯರು ಒಟ್ಟು 16 ಜನರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರ ಜಾಗ್ರತಿ ಕಾರ್ಯಕ್ರಮ”



ಜುಲೈ 12.2023 ರಂದು ಹುಮನಬಾದ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದ ಆರ್ ಜಿ ಹೆಬಾರೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳಿಗೆ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ರೋಗದ ಕುರಿತು ಅರಿವು ಮೂಡಿಸಲಾಯಿತು. ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೀಲಕಂಠ ಅವರು ಮಾತನಾಡುತ ಮಾನಸಿಕ ಕಾಯಿಲೆ ಎಂದರೇನು, ಹೇಗೆ ಬರುತ್ತದೆ ಮತ್ತು ಮನಸಿಕ ಅಸ್ವಸ್ಥತೆಯ ಲಕ್ಷಣಗಳು



ಯಾವವು ಮತ್ತು ಮಾನಸಿಕ ಅಸ್ವಸ್ಥರನ್ನು ಹೇಗೆ ಪುನರ್ವಸತಿಗೆ ತರಬಹುದು ಎಂದು ಹೇಳಿದರು. ಹಾಗೆಯೆ ಮಾನಸಿಕ ಅಸ್ವಸ್ಥ ರೋಗಕ್ಕೆ ಹಳ್ಳಿಖೇಡ (ಬಿ) ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ಲಭ್ಯವಿದ್ದು ಅದರ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.

## . “ಷೇರುದಾರರಿಗೆ ತರಬೇತಿ”

ಜುಲೈ 25 ರಂದು ಹುಮನಾಬಾದ ತಾಲೂಕಿನ ಹುಡಗಿ ಗ್ರಾಮದ PHC ಯಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಅಂಗನವಾಡಿ ಕಾರ್ಯಕರ್ತರಿಗೆ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದಂತಹ ಆರ್ಬಿಟ್ ಸಂಸ್ಥೆಯ ಸಹ ನೀರ್ದೇಶಕರಾದ ವಂದನೆಯ ಫಾದರ್ ವಿಜಯಕುಮಾರ ಅವರು ಕಾರ್ಯಕ್ತಮವನ್ನು ಉದ್ದೇಶಿಸಿ ಮಾತನಾಡುತ ಮನೆ ಕಟ್ಟಲು ಅಡಿಪಾಯ ಎಷ್ಟು ಮುಖ್ಯವೊ ಹಾಗೆಯೆ ಯಾವುದೆ ಒಂದು ಸಮಾಜ ಸೇವೆಯ ಕಾರ್ಯಕ್ರಮವನ್ನು ಯಶಸ್ವಿಯಾಗಲು ಅಂಗನವಾಡಿ ಕಾರ್ಯಕರ್ತರ ಪಾತ್ರ ಬಹುಮುಖ್ಯಯೆಂದು ವ್ಯಕ್ತಪಡಿಸಿದರು. ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣಕುಮಾರ, ಸಂಯೋಜಕರಾದ ಶ್ರೀ ಪ್ರವೀಣ್‌ಕುಮಾರ, ಅಂಗನವಾಡಿ ಮೇಲ್ವಿಚಾರಕಿಯಾದ ಶ್ರೀಮತಿ ದೈವತಾ ಹಾಗೂ ಅಂಗನವಾಡಿ ಕಾರ್ಯಕರ್ತಿಯರು ಒಳಗೊಂಡು ಒಟ್ಟು 40 ಜನ ಉಪಸ್ಥಿತರಿದ್ದರು.



# ಮಹಿಳಾ ಸಬಲೀಕರಣ ಕಾರ್ಯಕ್ರಮ



## “ಕ್ಯಾನ್ಸರ್ ಅರಿವಿನ ಜಾಗೃತಿ ಕುರಿತು ಕಾರ್ಯಕ್ರಮ”

ಜುಲೈ 04.2023 ರಂದು ಬೀದರ್ ವಲಯದ ಶಾಹಾಪೂರ್ ಗ್ರಾಮದ ಸರಕಾರಿ ಕಿರಿಯ ಪ್ರಥಮಿಕ ಶಾಲೆಯಲ್ಲಿ WEP ORBIT ವತಿಯಿಂದ ಕ್ಯಾನ್ಸರ್ ಅರಿವಿನ ಜಾಗೃತಿ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. WEP ORBIT ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ಅವರು ಕ್ಯಾನ್ಸರ್ ಎಂದರೇನು, ಕ್ಯಾನ್ಸರ್‌ನ ಚಿನ್ಹೆಗಳು ಹಾಗೂ ಲಕ್ಷಣಗಳು, ಕ್ಯಾನ್ಸರ್ ರೋಗವನ್ನು ಹೇಗೆ ತಡೆಗಟ್ಟಬಹುದು ಎಂಬುದರ ಬಗ್ಗೆ ಮಾಹಿತಿ ನೀಡಿದ್ದರು. ಕ್ಯಾನ್ಸರ್ ಕಾಯಿಲೆ ಕಂಡುಬಂದರೆ ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಉಪಾಧ್ಯಯರು, ಸಹ ಶಿಕ್ಷಕರು ಹಾಗೂ ಶಾಲೆಯ ಮಕ್ಕಳು ಒಳಗೊಂಡು ಒಟ್ಟು 39 ಜನ ಉಪಸ್ಥಿತರಿದ್ದರು.

## “ವನಮಹೋತ್ಸವ ಆಚರಣೆ”

ಚಿಟಗುಪ್ಪ ತಾಲೂಕಿನ ಪ್ರೀಯಾದರ್ಶಿನಿ ಕಾಲೋನಿಯಲ್ಲಿ ಜುಲೈ 11.2023 ರಂದು ಮುಮ್ತಾಜ್, ನಾನಾಹಜರೆತ್ ಮತ್ತು ಸೀಲಾರೆಮುಕ್ತುದಮ್ ಈ ಮೂರು ಸಂಘಗಳು ಆರ್ಬಿಟ್ ಸಂಸ್ಥೆಯ ಆಶ್ರಯದಲ್ಲಿದ್ದು ಸಂಘದ ಸದಸ್ಯರಿಗೂ ಹಾಗೂ ಇತರೆ ಜನಸಾಮಾನ್ಯರಿಗೂ ಅರಣ್ಯ ಇಲಾಖೆಯಿಂದ 50 ಸಸಿಗಳನ್ನು ವಿತರಿಸಿ, 5 ಸಸಿಗಳನ್ನು ಅಂಗನವಾಡಿ ಕೇಂದ್ರದಲ್ಲಿ ನೆಟ್ಟು ವನಮಹೋತ್ಸವ ಆಚರಣೆ ಮಾಡಿ ಪರಿಸರ ಸಂರಕ್ಷಿಸಲು ಪ್ರೇರಣೆ ನೀಡಲಾಯಿತ್ತು.





ಚಿಟಗುಪ್ಪ ತಾಲೂಕಿನ ಗಾಂಧಿನಗರ ಗ್ರಾಮದ ಸಂತ ಲಾರೆನ್ಸ್ ದೇವಾಲಯದಲ್ಲಿ ಜುಲೈ 9.2023 ರಂದು ಆರ್ಬಿಟ್ ಸಂಸ್ಥೆಯ ದಿವ್ಯ ಮತ್ತು ಮಾಳಿಂಗರಾಯ ಸಂಘದ ಸದಸ್ಯರು ಹಾಗೂ ಸಮುದಾಯದ ಜನರು ಸೇರಿ ಸಂಸ್ಥೆಯ ಕಾರ್ಯಕಾರ್ತರಾದ ಶ್ರೀಮತಿ ಸವಿತರವರ ನೇತೃತ್ವವದಲ್ಲಿ ವನಮಹೊತ್ಸವ ಕಾರ್ಯಕ್ರಮ ಆಚರಿಸಲಾಯಿತ್ತು. 21 ಜನ ಭಾಗವಹಿಸಿ, 68 ಸಸಿಗಳನ್ನು ವಿತರಣೆ ಮಾಡುವುದರೊಂದಿಗೆ ಶುದ್ದವಾದ ಗಾಳಿಯನ್ನು ಸೇವಿಸಿ, ಉತ್ತಮ ಆರೋಗ್ಯದಿಂದಿರಲು ಪ್ರೇರಣೆ ನೀಡಲಾಯಿತ್ತು.



# “ಮಹಾಸಂಘ/ಒಕ್ಕೂಟ ಬಲವರ್ಧನೆ ತರಬೇತಿ”

ಜೂಲೈ 24, 2023 ರಂದು ಹುಲಸೂರ ತಾಲೂಕಿನ ಮುಚಳಂಬ ಗ್ರಾಮದಲ್ಲಿ ಮಹಾಸಂಘ/ಒಕ್ಕೂಟ ಬಲವರ್ಧನೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕ್ಕೊಳಲಾಯಿತ್ತು. ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಫಾ॥ ವಿಕ್ಟರ್ ವಾಸ್ ಹಾಗೂ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದ ಸಂಯೋಜಕಿರಾದ ಶ್ರೀಮತಿ ನಿರ್ಮಾಲ ರವರು ಮಹಾಸಂಘ/ಒಕ್ಕೂಟ ಬಲವರ್ಧನೆ ಮತ್ತು ಸಂಘ ನೊಂದಾವಣೆ ಬಗ್ಗೆ ಮಾಹಿತಿ ನೀಡಿದರು. ಸಂಘಗಳು ಒಟ್ಟಾಗಿ ಮಹಾಸಂಘ ರಚಿಸಿ ಎಲ್ಲಾರು ಜೊತೆಗೂಡಿ ನಿಮ್ಮಗ್ರಾಮದ ಹಲವರು ಸಮಸ್ಯೆಗಳನ್ನು ಗುರುತಿಸಿ ಸರಕಾರದಿಂದ ಲಭ್ಯವಿರುವ ಸೌಲಭ್ಯಗಳನ್ನು ಹಾಗೂ ನಿಮ್ಮ ಹಕ್ಕುಗಳನ್ನು ಪಡೆಯಲು ಶ್ರಮಿಸಿದರೆ ನಿಮ್ಮಗು ನಿಮ್ಮ ಗ್ರಾಮಕ್ಕೂ ಒಳಿತಾಗುವುದು ಎಂದು ಪ್ರೇರಣೆ ನೀಡಿದರು.




# “ಲಿಂಗ ಸಮಾನತೆ ತರಬೇತಿ”




ಜುಲೈ 19.2023 ರಂದು ಭಾಲ್ಕಿ ತಾಲೂಕಿನ ಕೋಸಂ ಗ್ರಾಮದಲ್ಲಿ ಲಿಂಗ ಸಮಾನತೆ ತರಬೇತಿಯನ್ನು ಆರ್ಬಿಟ್ ಸಂಸ್ಥೆಯ ಸ್ಥಳಿಯ ಸಂಯೋಜಕರು ಸಿ॥ ಜೀವಲತಾ ಹಾಗೂ ಶ್ರೀಮತಿ ಗೀತಾರವರು ಆಯೋಜಿಸಿದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಶಾಲೆಯ ಮುಖ್ಯೋಪದ್ಯಾರಾದ ಶ್ರೀ ಶಿವರಜ ಪಟ್ನೆರವರು ಆಗಮಿಸಿದ್ದು 4 ಸಂಘಗಳ 21 ಸದಸ್ಯರಿಗೆ ಲಿಂಗ ಸಮಾನತೆಯ ಕುರಿತು ಅರಿವು ಮುಡಿಸಿದರು. ಸಮಾನ ಶಿಕ್ಷಣದ ಮಹಾತ್ವಯೇತಿಡಿದು, ಗಂಡು ಹೆಣ್ಣುಯೆಂಬ ಭೇದ ಭಾವವಿಲ್ಲದೆ, ನಿಮ್ಮ ಹಕ್ಕುಗಳ ಉಲ್ಲಂಘನೆಯಾಗದಂತೆ ಕಾಪಡಿಕೊಳ್ಳಬೇಕು ಎಂದು ಅರಿವಿನ ಮಾತುಗಳೂಂದಿಗೆ ಮಹಿಳೆಯರನ್ನು ಪ್ರೇರೆಪಿಸಿದರು.

# ”ಪರಿಸರ ಕುರಿತು ಜಾಗೃತಿ ಕಾರ್ಯಕ್ರಮ”

ಜುಲೈ 16.2023 ರಂದು ಚಿಟ್ಟಗುಪ್ಪಾ ತಾಲೂಕಿನ ವಡ್ಡನಕೇರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ನಿತ್ಯಸಹಾಯಮಾತೆ ದೇವಾಲಯದ ಅವರಣದಲ್ಲಿ ಆಚರಣೆ ಮಾಡಲಾಯಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆರಣ್ಯ ಇಲಾಖೆ ಸಿಪಾಯಿ ಶ್ರೀ ರಾಜಪ್ಪ ಜಮದರ ರವರು ಭಾಗವಹಿಸಿ ಪರಿಸರ ನಾಶನದ ಬಗ್ಗೆ, ಪರಿಸರದಿಂದ ಆಗುವ ದುಷ್ಪಪರಿಣಾಮಗಳು ಹಾಗೂ ಪ್ಲಾಸ್ಟಿಕ್ ಬಳಕೆಯ ಅಪಾಯಗಳು ಕುರಿತು ಮಾತನಾಡಿದರು. ಪ್ರತಿಯೊಬ್ಬರು ಮನೆಗೋದು ಸಸಿಗಳನ್ನು ನೆಟ್ಟು ಪರಿಸರವನ್ನು ಕಾಪಾಡಬೇಕು ಎಂದು ತಿಳಿಸಿದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ಅಮಿತಾರವರು ಪರಿಸರದಿಂದ ಒಳ್ಳೆಯ ಆಮ್ಲಜನಕ ಹಾಗೂ ಶುದ್ಧವಾದ ವಾತಾವರಣ ನೀಡುತ್ತದೆ ಎಂದು ಮಾಹಿತಿ ನೀಡಿ 20 ಗಿಡಗಳನ್ನು ವಿತರಿಸಿದರು. ಈ ಕಾರ್ಯಕ್ರಮದಲ್ಲಿ 22 ಜನ ಮಹಿಳೆಯರು ಭಾಗವಹಿಸಿದರು. ಶ್ರೀಮತಿ ಭಾಗ್ಯಶ್ರೀಯವರು ವಂದನಾರ್ಪಣೆಯೊದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ

Read, Discuss & Debate With Editor,
Dr. N Prashant Rao
ಭಾರತ BV NEWS ವೈಭವ
New Dehli RNI Reg.No.51768
ಕನ್ನಡ ದಿನಪತ್ರಿಕೆ
BV NEWS KANNADA bharathvaibhav.com 94826 33333 bvdaily2013@gmail.com Bharat Vaibhav Daily
Page (5)
11 Jul 2023

POWERED BY. KHUSHI HOST

## ಗಿಡ ಮರ ಬೆಳೆಸಿ ಉಳಿಸಿ



**ಭಾರತ ವೈಭವ: ಸಜೀಶ ಲಂಬುನೋರ್**

ಚಿಟ್ಟಗುಪ್ಪ: ಪ್ರತಿಯೊಬ್ಬರೂ ಗಿಡ ಮರಗಳನ್ನು ಬೆಳಸಿ ಅವುಗಳನ್ನು ಉಳಸಿಕೊಳ್ಳವುದರಿಂದ ಶುದ್ಧ ಗಾಳಿಯನ್ನು ಪಡೆಯಲು ಸಾಧ್ಯವಾಗುತ್ತೆ ಎಂದು ಸಂತ ಲಾರೆನ್ಸ್ ದೇವಾಲಯದ ನಿರ್ದೇಶಕರಾದ ವಂ.ಸ್ವಾಮಿ ಫಾದರ್ ಲಿವಿನ್ ಹೇಳಿದರು. ತಾಲೂಕಿನ ಗಾಂಧಿನಗರದ ಸಂತ ಲಾರೆನ್ಸ್ ದೇವಾಲಯದ ಆವರಣದಲ್ಲಿ ದಿನಾಂಕ 9-7-2023 ರವಿವಾರ ದಿನದಂದು ಮಹಿಳಾಭಿವೃದ್ಧಿ ಕಾರ್ಯಕ್ರಮ ಮಿಜೋರಿಯರ್ ಹಾಗೂ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರ ಸಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಫಾದರ್, ಆರ್ಬಿಟ್ ಸಂಸ್ಥೆ ಬಡವರ ಏಳಿಗೆಗಾಗಿ ಶ್ರಮಿಸುತ್ತಿದ್ದು,ಮಹಿಳಾಭಿವೃದ್ಧಿಗೆ ಅನೇಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ.ಮಹಿಳೆಯರು ಕುಟುಂಬದವರ ಅಭಿವೃದ್ಧಿ ಕಡೆಗೆ ಸಾಗಿ ಸಮುದಾಯದಲ್ಲಿ ನಾಯಕರಾಗಿ ಬೆಳೆಯಬೇಕು ಜೊತೆಗೆ ಒಳ್ಳೆಯ ಆರೋಗ್ಯವಂತರಾಗಿರಬೇಕು. ಅದಕ್ಕಾಗಿ ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಮರವನ್ನು ಬೆಳೆಸಿ ಶುದ್ಧವಾದ ವಾತಾವರಣವನ್ನು ನಿರ್ಮಿಸಬೇಕು.ಇತರ ಜನರಲ್ಲಿ ಅರಿವು ಮೂಡಿಸಿ ಒಳ್ಳೆ ಪರಿಸರವನ್ನು ರೂಪಿಸುವಲು ತಿಳಿಸಬೇಕು. ಆರ್ಬಿಟ ಸಂಸ್ಥೆ ಮುಖ್ಯ ಉದ್ದೇಶ ಕೂಡ ಅದೇ ಆಗಿದೆ ಎಂದರು. ಮರಿಯ ನಿಕೇತನ್ ಕಾನ್ವೆಂಟ್ನ ಮೇಲ್ವಿಚಾರಕರಾದ ಸಿಸ್ಟರ್ ಸ್ಟೆಲ್ಲಾ ಮೇರಿ ಮಾತಾಡಿ,ಗಿಡಗಳಿಂದ ನೈಸರ್ಗಿಕವಾಗಿ ಬೀಸುವ ಗಾಳಿ ನಮ್ಮ ಆರೋಗ್ಯಕ್ಕೆ ಒಳ್ಳೆಯದನ್ನೇ ಬಯಸುತ್ತದೆ.

# ಸೇವಾ ಸಂಗಮ ಸಂಸ್ಥೆ ಕಲಬುರಗಿ

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ






ಕಲಬುರಗಿ 12/07/2023 ರಂದು ಸೇವಾ ಸಂಗಮ ಸಂಸ್ಥೆ ಅಜೀಮ್ ಪ್ರೇಮಜಿ ಪೌಂಡೆಶನ್ ಸಂಯುಕ್ತಾಶ್ರಯದಲ್ಲಿ ಕಲಬುರಗಿ ನಗರ ಪ್ರದೇಶದಲ್ಲಿರುವ ಅಂಗನವಾಡಿ ಕಾರ್ಯಕರ್ತರಿಗೆ ಒಂದು ದಿನದ ತರಬೇತಿ ಹಮ್ಮಿಕೊಳ್ಳಲಾಯಿತು. ಆರೋಗ್ಯವೇ ಭಾಗ್ಯ ಎನ್ನುವಂತೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಅಂಗನವಾಡಿ ಕೇಂದ್ರದಲ್ಲಿ ಸಾಮಾನ್ಯ ಮಕ್ಕಳೊಡನೆ ಕಲಿಯಲು ಅವಕಾಶ ಮಾಡಿ ಕೊಟ್ಟು, ವಿಶೇಷವಾದ ಕಾಳಜಿ ಉತ್ತಮವಾದ ಪೌಷ್ಠಿಕ ಆಹಾರ ಸಿಗುವಂತಾಗಬೇಕೆಂದು ಕಲಬುರಗಿ ಧರ್ಮ ಕ್ಷೇತ್ರದ ಶ್ರೇಷ್ಠ ಗುರುಗಳಾದ ಫಾದರ್ ಸ್ಟ್ಯಾನಿ ಲೋಬೊ ರವರು ಮಾತನಾಡಿದರು. ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ ರವರು 0-6 ವರ್ಷದ ಮಕ್ಕಳಲ್ಲಿರುವ ನ್ಯೂನತೆಯನ್ನು ಅತಿ ಶಿಘ್ರವಾಗಿ ಪತ್ತೆಹಚ್ಚುವ ಮೂಲಕ ವಿವಿಧ ರೀತಿಯ ಚಟುವಟಿಕೆಗಳ ಮೂಲಕ ಅವರಲ್ಲಿರುವ ನ್ಯೂನತೆಯನ್ನು ಹಂತ ಹಂತವಾಗಿ ಕಡಿಮೆ ಮಾಡಬಹುದಾಗಿದೆ ಎಂದು ಹೇಳಿದರು. ಅಂಗನವಾಡಿ ಕೇಂದ್ರಗಳಲ್ಲಿರುವ ಸಾಧನೆ ಸಲಕರಣೆಗಳನ್ನು ಉಪಯೋಗಿಸಿಕೊಂಡು ಮಕ್ಕಳ ಬೌದ್ಧಿಕ, ದೈಹಿಕ ಮಟ್ಟವನ್ನು ಹೆಚ್ಚಿಸಬಹುದಾಗಿದೆ ಎಂದು ಶ್ರೀಮತಿ ವಿಜಯಲಕ್ಷ್ಮೀ ಮೇಲ್ವಿಚಾರಕರು ಅಂಗನವಾಡಿ ಕೇಂದ್ರ ಅಶೋಕ ನಗರ ವಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಕಲಬುರಗಿ ಇವರು ತಿಳಿಸಿದರು. ಸೇವಾ ಸಂಗಮ ಸಂಸ್ಥೆಯು ಸುಮಾರು ವರ್ಷಗಳಿಂದ ವಿವಿಧ ರೀತಿಯ ಯೋಜನೆಯ ಮುಖಾಂತರ ಸಮಾಜದಲ್ಲಿ ಅಭಿವೃದ್ದಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ ಎಂದು ಹೇಳಿದರು. ಶ್ರೀ ಮತಿ ಶಿವಕಾಂತ ದೊಡ್ಡಮನಿ ನಿರೂಪಸಿ ಶ್ರೀ ರಾಜಕುಮಾರ ದೇವರಮನಿ ಸ್ವಾಗತಿಸಿ ಶ್ರೀ ಮತಿ ಜಗದೇವಿ ವಂದಿಸಿದರು.



ದಿನಾಂಕ 13/7/2023 ರಂದು ಕಲಬುರಗಿ ತಾಲ್ಲೂಕಿನ ಬೋರಬಾಯಿ ನಗರದಲ್ಲಿ ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅರಿವಿನ ಕಾರ್ಯಕ್ರಮ ಹಮ್ಮಿಕೋಳ್ಳಲಾಗಿತ್ತು, ಕಾರ್ಯಕ್ರಮದಲ್ಲಿ 0-6 ವರ್ಷದೋಳಗಿನ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಹೇಗೆ ಗುರುತುಸಬೇಕು ಮತ್ತು ಗುರುತಿಸಿದ ನಂತರ ಆ ಮಕ್ಕಳಲ್ಲಿರುವ ನ್ಯೂನತೆಯನ್ನು ಕಡಿಮೆಮಾಡಲು ಸೇವಾ ಸಂಗಮ ಸಂಸ್ಥೆಯಿಂದ ಎನೆಲ್ಲ ಚಟುವಟಿಕೆ ಮಾಡುತ್ತೆವೆ ಎಂದು ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಶಿವಕಾಂತಾ ಅವರು ತಿಳಿಸಿದರು, ಅಂಗನವಾಡಿ ಮೇಲ್ವಿಚಾರಕಿಯಾದ ವಿಜಯಲಕ್ಷ್ಮಿ ಉಪಸ್ಥಿತರಿದ್ದರು. ಈ ಮಾಹಿತಿ ಕಾರ್ಯಕ್ರಮದಲ್ಲಿ 30 ಜನ ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದರು.

ಜುಲೈ 24 ರಂದು ಕಲಬುರಗಿ ತಾಲ್ಲೂಕಿನ ಪಟ್ಟಣ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಶೀಘ್ರ ಪತ್ತೆಹಚ್ಚುವಿಕೆ ಆರಂಭಿಕ ಶಿಕ್ಷಣ ಕುರಿತು ಪಾಲಕರಿಗೆ ಮತ್ತು ಪೋಷಕರಿಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಯಿತು. ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಕುಮಾರಿ ಲಕ್ಷೀ ಅವರು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅರಿವಿನ ಕಾರ್ಯಕ್ರಮ ಹಮ್ಮಿಕೋಳ್ಳಲಾಗಿತ್ತು, 0-6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಗುರುತಿಸಿ ಮೌಲ್ಯಮಾಪನ ಮಾಡುವುದರ ಮೂಲಕ ಹಂತ ಹಂತವಾಗಿ ಮನೆಗೆ ಮತ್ತು ಕೇಂದ್ರಕ್ಕೆ ಕರೆದು, ಚಟುವಟಿಕೆ ನೀಡುವುದರ ಮೂಲಕ ಮಕ್ಕಳ ಪಾಲನೆ ಪೋಷಣೆ ಮಾಡುವುದು. ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನ ಸದಸ್ಯರು ಭಾಗವಹಿಸಿದರು, ಅದರಲ್ಲಿ ಅಂಗನವಾಡಿ ಕಾರ್ಯಕರ್ತರು, ಸಹಾಯಕಿಯರು, ಉಪಸ್ಥಿತರಿದ್ದರು.



## ಪೌಷ್ಠಿಕ ಆಹಾರದ ಕುರಿತು ಅರಿವು ಕಾರ್ಯಕ್ರಮ





ಬಸವೇಶ್ವರ ಕಾಲೂನಿಯ ಅಂಗನವಾಡಿ ಕೇಂದ್ರ 1 ರಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಪೌಷ್ಠಿಕ ಆಹಾರದ ಕುರಿತು ಅರಿವು ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಯಿತ್ತು, ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಚೈತನ್ಯ ಹಾಗೂ ಮಕ್ತಾಮಪೂರ ಪಿ,ಎಚ್,ಸಿ,ಯ ಜಯಶ್ರೀ ಸಿಸ್ಟರ ಅವರು ಮತ್ತು 1 ಜನ ಪಾಲಕರು ಪಾಲ್ಗೊಂಡಿದ್ದರು.ಪ್ರಸ್ತುತ ಸಮಯದಲ್ಲಿ ನಾವು ಸೇವಿಸುತ್ತಿರುವಂತಹ ಆಹಾರದಲ್ಲಿ ಪೌಷ್ಠಿಕಾಂಶ ಸತ್ವ ಕಡಿಮೆ ಇದೆ. ಮಹಿಳೆಯರು, ಗರ್ಭಿಣಿ ಮಹಿಳೆಯರು ಆಗಲಿ ಮಕ್ಕಳಾಗಲ್ಲಿ ಉತ್ತಮ ರೀತಿಯ ಪೌಷ್ಠಿಕಾಂಶ ವಿರುವಂತ ಆಹಾರ ತರಕಾರಿಗಳನ್ನು ಸೇವಿಸುವುದು ದ್ವಿದಳ ಧಾನ್ಯಗಳು ಮಾಳಕೆ ಭರಿಸಿ ಅಂತಹ ಕಾಳುಗಳನ್ನು ಹಸಿಯಾಗಿಯೇ ಸೇವಿಸುವುದು, ಹಸಿ ತರಕಾರಿ ಪಲ್ಯ, ಬಿಟ್ ರೂಟ್ ರಕ್ತ ಉತ್ಪತಿಯಾಗುವುದು, ಖರೀದಿ ಮಾಡಲು ಆಗದಿದರು ಮನೆಯ ಸುತ್ತಮುತ್ತಲು ಜಾಗ ಇದ್ದರೆ ಅಲ್ಲಿ ಬೆಳೆಸಬಹುದು, ಟೂಮಾಟೂ, ಕುಂಬಳಕಾಯಿ, ಹಾಗಲಕಾಯಿ ಇತರೆ ಪದಾರ್ಥಗಳು ಸೇವಿಸಬೇಕು. ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ 2000 ದಿಂದ 2500 ಕಾಲರಿ ಪೌಷ್ಠಕಾಂಶವನ್ನು ಹೊಂದಿರುವುದಾಗಿದೆ. ಅಂದಾಗ ಮಾತ್ರ ವ್ಯಕ್ತಿ ಆರೋಗ್ಯವಾಗಿರುತ್ತದೆ, ಅದೇ ರೀತಿ ಹಣ್ಣು, ತರಕಾರಿ, ಮೊಟ್ಟೆಗಳು ಸೇವಿಸಿ ಎಂದು ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಜಗದೇವಿ ಅವರು ತಿಳಿಸಿದರು.

ಕಲಬುರಗಿ ನಗರ ಪ್ರದೇಶದಲ್ಲಿ ಬರುವ ಅಂಬಿಕಾ ನಗರದಲ್ಲಿ ಜುಲೈ 24 ರಂದು ಪೌಷ್ಟಿಕ ಆಹಾರ ಕುರಿತು ಅರಿವು ಕಾರ್ಯಕ್ರಮವನ್ನು ಸೇವಾ ಸಂಗಮ ಸಂಸ್ಥೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಯಿತ್ತು. ಕುಮಾರಿ ಅನಿತಾ ಮಹಿಳೆಯರನ್ನು ಉದ್ದೇಶಿಸಿ ಮಾತನಾಡುತ್ತಾ ಪೌಷ್ಟಿಕ ಆಹಾರ ಪ್ರಸ್ತುತ ದಿನಗಳಲ್ಲಿ ಮಹಿಳೆಯರಿಗೆ ಅತ್ಯಂತ ಅವಶ್ಯಕವಾದ ಆಹಾರವಾಗಿದೆ ಮಹಿಳೆಯರು ಪ್ರತಿದಿನದ ಆಹಾರ ಪದ್ದತಿಯಲ್ಲಿ ಕಬ್ಬಿಣ ಅಂಶ, ರಕ್ತದ ಬೆಳವಣಿಗೆಗಾಗಿ ಹಸಿರು ತರಕಾರಿ, ಮೊಳಕೆ ಒಡೆದ ಬೆಳೆ ಕಾಳುಗಳು, ಬೆಲ್ಲದ ಜೊತೆ ಸೆಂಗಾ ಸೇವಿಸುವಂತೆ ಆಗಬೇಕು ಇದರಿಂದ ಮಹಿಳೆಯರಲ್ಲಿ ಬೇಕಾಗುವ ಪೌಷ್ಟಕ ಆಹಾರ ಲಭ್ಯವಾಗುತ್ತದೆ ಎಂದು ತಿಳಿಸಿದರು.



## ಉಜ್ಜೀವನ ಕಾರ್ಯಕ್ರಮ



ಜುಲೈ 18 ರಂದು ಕಲಬುರಗಿ ಜಿಲ್ಲೆಯ ಸೀತನೂರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಸಂಯೋಜಕರು ಮತ್ತು ಕಾರ್ಯಕರ್ತರು ಭೇಟಿ ಮಾಡಿ ಉಜ್ಜೀವನ ಮೂರನೆ ಹಂತದ ಯೋಜನೆ ಅಡಿಯಲ್ಲಿ ಸಮುದಾಯಗಳ ಗುಂಪುಗಳನ್ನು ಮರುಬಲಪಡಿಸುವು ಕಾರ್ಯಕ್ರಮವನ್ನು ಮಾಡಲಾಯಿತ್ತು . ಈ ಕಾರ್ಯಕ್ರಮದ ಮೂಲಕ ಅಲ್ಲಮ ಪ್ರಭು ಎಂಬ ರೈತಪುರುಷ ಸಂಘವನ್ನು ರಚನೆ ಮಾಡಲಾಯಿತ್ತು. 15 ಜನ ಸದಸ್ಯರನ್ನು ಒಳಗೊಂಡಿದೆ. ಇದರ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿರವರು ಸಂಘದ ಗುರಿ ಉದ್ದೇಶಗಳನ್ನು ತಿಳಿಸಿಕೋಡಲಾಯಿತು.ಹಾಗೂ ಸೇವಾ ಸಂಗಮ ರೈತರ ಗುಂಪಿನಲ್ಲಿ ಸದಸ್ಯರನ್ನು ಸೇರಿಸಲಾಯಿತ್ತು. ಈ ಗುಂಪಿನಲ್ಲಿ ಕೃಷಿಯ ಮೂಲಕ ಪ್ರಾಧ್ಯನತೆ ಹಾಗೂ ಸರಕಾರಿ ಮೂಲ ಸೌಕಾರ್ಯಗಳ ಬಗ್ಗ ಮಾಹಿತಿಯನ್ನು ಪಡೆದುಕೊಳುತ್ತಿದ್ದಾರೆ.

ಜುಲೈ 03 ರಂದು ಕಲಬುರಗಿ ಜಿಲ್ಲೆಯ ನಂದೂರ (ಕೆ). ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಮೂರನೇ ಹಂತದ ಯೋಜನೆಯಡಿಯಲ್ಲಿ ಸಂಯೋಜಕರು ಮತ್ತು ಕಾರ್ಯಕರ್ತರು ಶ್ರೀ ಭಾಗ್ಯವಂತಿ ಮಹಿಳಾ ಸ್ವ-ಸಹಾಯ ಸಂಘದ 20 ಜನ ಸದಸ್ಯರಿಗೆ ಪಶು ಇಲಾಖೆಯಿಂದ ಕುರಿ ಸಕಾಣಿಕೆ ತರಬೇತಿಯ ಬಗ್ಗೆ ಮಾಹಿತಿ ತಿಳಿಸಿಲಾಯಿತು. ಆ ಮಾಹಿತಿಯನ್ನು ಪಡೆದುಕೊಂಡು. ಪಶು ಇಲಾಖೆಯ ಕೆಂದ್ರದಲ್ಲಿ 5 ಮಹಿಳೆಯರು ಭಾಗವಹಿಸಿ. ಸದುಪಯೋಗವನ್ನು ಪಡೆದುಕೊಂಡು ಇವರು ತರಬೇತಿಯ ಪ್ರಮಾಣ ಪತ್ರವನ್ನು ಪಡೆದುಕೂಂಡರು. ಶ್ರೀಮತಿ ಸಂಗಿತಾ ಗಂ/ ಆನಂದ ಇವರು ಧರ್ಮಸ್ಥಳ ಸಂಘದಲ್ಲಿ 50,000 ರೂಪಾಯಿಗಳನ್ನು ಸಾಲವನ್ನು ಪಡೆದುಕೊಂಡು 08 ಕುರಿಗಳನ್ನು ಕರೀದಿಸಿಕೂಂಡು ಸಾಕುತ್ತಿದ್ದಾರೆ. ಪ್ರಸುತವಾಗಿ 14 ಕುರಿ ಆಗಿದು ಸ್ವ-ಉದ್ಯೋಗವನ್ನು ಮಾಡಿಕೂಂಡು ಒಂದು ಕುರಿಯನ್ನು 8000 ರೂಪಾಯಿಗಳಿಗೆ ಮಾರಾಟ ಮಾಡಿ ಆದಾಯವನ್ನು ಪಡೆದುಕೊಳುತ್ತಿದ್ದಾರೆ.



## ಉಜ್ಜೀವನ ಮೂರನೇ ಹಂತದ ಅರ್ಧ ವಾರ್ಷಿಕ ವರದಿ ಮಂಡನೆ




**ಉಜ್ಜೀವನ ಮೂರನೇ ಹಂತದ ಯೋಜನೆಯ ಅಡಿಯಲ್ಲಿ ಬೆಳಗಾಂ ಪ್ರಾಂತ್ಯದ ಧಾರವಡ ಸಂಸ್ಥೆಯಲ್ಲಿ ಅರ್ಧ ವಾರ್ಷಿಕ ಸಭೆಯನ್ನು ಆಯೋಜಿಸಿದ್ದರು. ಅಲ್ಲಿ ಏಳು ಧರ್ಮಕ್ಷೇತ್ರಗಳು ಈ ಸಭೆಯಲ್ಲಿ ನಿರ್ದೆಶಕರು ಸಂಯೋಜಕರು ಕಾರ್ಯಕರ್ತರು ಭಾಗವಹಿಸಿದರು. ಈ ಸಭೆಯಲ್ಲಿ ಕಲಬುರಗಿ ಧರ್ಮಕ್ಷೇತ್ರದ ಸೇವಾ ಸಂಗಮ ಸಂಸ್ಥೇಯ ಉಜ್ಜೀವನ ಯೋಜನೆಯ ಅಡಿಯಲ್ಲಿನ 6 ತಿಂಗಳ ವರದಿಯನ್ನು ಧಾರವಡ ಕ್ಷೇತ್ರದ ಸೇವಾಲಯ ಸಂಸ್ಥೇಯಲ್ಲಿ ದಿನಾಂಕ 12/07/23 ರಂದು ವರದಿಯನ್ನು ಸಂಯೋಜಕರು ಮಂಡನೆ ಮಾಡಿದರು.ದಿನಾಂಕ 13/07/23 ರಂದು 3 ರಾಜ್ಯದ ಯು3ಯ ಕಾರ್ಯಕ್ರಮದ ವ್ಯವಸ್ಥಾಪಕರದ ಡಾ// ಹರಿದಾಸ ಸರ ಅವರು ಮಾಹಿತಿಯನ್ನು ತಿಳಿಸಿದರು. ಶಿಕ್ಷಣಕ್ಕೆ ಹೆಚ್ಚಿನ ಆಧ್ಯತೆಯನ್ನು ನೀಡುವುದು, ಕೃಷಿ ವಿಶ್ವ ವಿದ್ಯಾಲಯಕ್ಕೆ ಭೇಟಿ, ಗ್ರಾಮೀಣ ಭಾಗದಲ್ಲಿ ಅನಕ್ಷರಸ್ಥರನ್ನು ಗುರುತಿಸುವುದು, ಸರಕಾರದ ಮೂಲ ಸೌಕರ್ಯಗಳನ್ನು ಗ್ರಾಮೀಣ ಭಾಗದ ಜನರಿಗೆ ತಿಳಿಸುವುದ. ಯುವಕ ಯುವತಿಯರಿಗೆ ಉದ್ಯೋಗದ ಸೌಲಭ್ಯಗಳು ತಿಳಿಸವುದು. ಮೂರು ರಾಜ್ಯದ ಲೇಕ್ಕ ಪರಿಶೊಧಕರಾದ ನಿಕ್ಸನರವರು ಎನ ಜಿ ಒ ಹಣಕಾಸು ನಿರ್ವಹಣೇಯ ಅಡಿಯಲ್ಲಿ ಜಿ.ಎಸ.ಟಿ ಮತ್ತು ಟಿ.ಡಿ.ಎಸ ಅಪಾಯ ನಿರ್ವಹಣೇಯ ಬಗ್ಗೆ ತಿಳಿಸಿದರು.**





ದಿನಾಂಕ 14/07/23 ರಂದು ಚಂದ್ರಗಿರಿ ಹಳೀಯ ರೇಣುಕಾ ಕಾಲೋನಿಯಲ್ಲಿ ರೈತರ ಹೋಲ ಭೇಟಿ ಮತ್ತು ಜೀವಾಮೃತ, ನೀಮಾಸ್ತ್ಯ, ಬ್ರಹ್ಮಂಸ್ತ್ಯ, ಗ್ರೋಕೃಪಾ, ಹಾಗೊ ಎರೇಜಲ, ಜೇನು ಸಕಾಣೀಕೆ, ಮೀನು ಸಕಾಣೀಕೆ, ಕೃಷಿಹೊಂಡ, ಮೀಶ್ರ, ಬೆಳೆಗಳ ಬಗ್ಗೆ ಈ ಒಂದು ಕ್ಷೇತ್ರ ಭೇಟಿಯಲ್ಲಿ ವಿಷಯಗಳನ್ನು ಅರಿತುಕೋಳಲಾಯಿತ್ತು.

## ಸ್ಪರ್ಶ ಕ್ಯಾನ್ಸರ ಕಾರ್ಯಕ್ರಮ

### ಆರೋಗ್ಯವೆ ಭಾಗ್ಯ" "

ದಿನಾಂಕ 12/7/2023 ರಂದು ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯಲ್ಲಿ ವಿವಿದ ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತರಿಗೆ ಕ್ಯಾನ್ಸರ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತ್ತು, ಈ ಕಾರ್ಯಕ್ರಮದಲ್ಲಿ ಸ್ಪರ್ಶ ಕ್ಯಾನ್ಸರ ಕಾರ್ಯಕ್ರಮದ ಸಂಯೋಜಕಿಯಾದ ಸ್ವಾತಿ ಅವರು ಕ್ಯಾನ್ಸರ ಬರಲು ಕಾರಣಗಳು ಮತ್ತು ಪರಿಣಾಮಗಳು ಕ್ಯಾನ್ಸರ ಬರದಂತೆ ನಾವು ಹೇಗೆ ತಡೆಗಟ್ಟಬೇಕು ಮತ್ತು ಹಳ್ಳಿಗಳಲ್ಲಿ ತಪಾಸಣೆ ಶಿಬಿರ ಏರಪಡಿಸುವುದರ ಮುಲಕ ಆ ಶಿಬಿರದಲ್ಲಿ ಹೊಸ ರೋಗಿಯನ್ನು ಗುರುತಿಸಿದ್ದರೆ ಅವರಿಗೆ ಮುಂದಿನ ಚಿಕ್ಸಿತೆಗೆ ನಮ್ಮ ಸೇವಾ ಸಂಗಮ ಸಂಸ್ಥೆಯಿಂದ ಸಹಾಯ ಮಾಡುತ್ತೇವೆ ಎಂದು ತಿಳಿಸಿದರು, ಈ ಕಾರ್ಯಕ್ರಮದಲ್ಲಿ 55 ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು.



### ಸ್ಪರ್ಶ ಕ್ಯಾನ್ಸರ ಮಾಹಿತಿ ಕಾರ್ಯಕ್ರಮ



ಜುಲೈ 18 ರಂದು ಕಲಬುರಗಿ ತಾಲ್ಲೂಕಿನ ಪಾಣೆಗಾವ್ ಗ್ರಾಮದಲ್ಲಿ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯ ಕ್ಯಾನ್ಸರ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ಅವರು ಕ್ಯಾನ್ಸರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಸ್ವ-ಸಹಾಯ ಸಂಘದ ಮಹಿಳೆಯರಿಗಾಗಿ ಆಯೋಜಿಸಲಾಯಿತ್ತು, ಕ್ರಾರ್ಯಕ್ರಮದಲ್ಲಿ ಕ್ಯಾನ್ಸರನ ಲಕ್ಷಣಗಳು ಗುಣಗಳು ಹಾಗೂ ಕ್ಯಾನ್ಸರ ತಪ್ಪಾಷಣೆ ಮಾಡಿಸಿಕೊಳ್ಳುವುದರಿಂದ ಆಗುವ ಲಾಭಗಳ ಕುರಿತು ಮಾಹಿತಿಯನ್ನು ನೀಡಿದರು, ಈ ಕಾರ್ಯಕ್ರಮದಲ್ಲಿ 12 ಜನ ಸ್ವ-ಸಹಾಯ ಸಂಘದ ಮಹಿಳೆಯರು ಮತ್ತು ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿಗಳಾದ ಅರ್ಚನಾ ಮತ್ತು ಇಂದುಬಾಯಿ ಅವರು ಭಾಗವಹಿಸಿದರು.



# Organization of Bidar Integral Transformation (ORBIT)



# APPEAL

## *Remove 'DIS' From DISABLE*

(Only for Indian citizens)

**Account Details :**
**Organization of Bidar Integral**
**Account Number: 3410101006386**
**IFSC: CNRB0003410**
**Branch: Humnabad**

**DONATE NOW**

**Donation Exempted U/S 80G of IT Act 1961**

## *Sponsor a Child with Rs. 500 per Month /6000 per Year.*

*Our goal is to "Focus on what children can do, their abilities, rather than their disability."*

**ACTION PLANS :**

1. Assessment and screening of 0-6 years children.
2. Home and Rehabilitation Centre-based intervention support.
3. For Children therapeutic and for Parents/ care takers counselling support.
4. Physical Assessment and distribution of Aids and Appliances.
5. Continuous medication, physiotherapy and surgery support.
6. Physical nourishment through nutritious food support.
7. Social Security and advocacy -UDID, Aadhaar Card & School Enrolment,

**Sponsor a child because every child needs someone like You**

**ADDRESS**
ORBIT, N.H 65, Near Railway Station, Hydrabad Road,
Humnabad Tq. Dist. Bidar, Karnataka 585330
Contact Number: 8660968063, 9743112739
Email: orbitbidar93@gmail.com website: www.orbitbidar.org

**Fr. Victor Anil Vas**
Director ORBIT

Note : Please WhatsApp your address to the above given number after sending money.